ಡಿಡಬ್ಲ್ಯೂ-4
ಓ ಎಸ್ 42/2014

ದಿನಾಂಕಃ 05-12-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್ ವಾದಿಗಳ ಪರ ವಕೀಲರಿಂದಃ</u> ನಾನು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನನಗೆ ಗೊತ್ತಿರುವ ಮಾಹಿತಿಯಂತೆ ಬರೆಸಿದ್ದೇನೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿಲ್ಲ. ಪ್ರತಿವಾದಿ 21 ರವರು ನನಗಿಂತ 3 ವರ್ಷ ಹಿರಿಯರು. ಪಾಲು ವಿಭಾಗವನ್ನು 30 ವರ್ಷಗಳ ಹಿಂದೆ ಮಹೇಶಪ್ಪ ಮತ್ತು 21 ನೇ ಪ್ರತಿವಾದಿ ಮಾಡಿಕೊಂಡಿದ್ದಾರೆ. ಸದರಿ ವಿಭಾಗದಲ್ಲಿ ಗಂಗಮ್ಮನಿಗೆ ಯಾವುದೇ ಪಾಲು ನೀಡಿರುವುದಿಲ್ಲ. ಪಾಲು ವಿಭಾಗವನ್ನು ಲಿಖಿತ ರೂಪದಲ್ಲಿ ಮಾಡಿಕೊಂಡಿದ್ದಾರವೋ ಇಲ್ಲವೋ ಗೊತ್ತಿಲ್ಲ. 2 ಜಮೀನುಗಳಲ್ಲಿ ತಲಾ ಒಂದೊಂದನ್ನು ಒಬ್ಬರು ಪಡೆದುಕೊಂಡಿದ್ದು, ಮನೆಯನ್ನು ಅರ್ಧ ಅರ್ಧ ಭಾಗ ಮಾಡಿಕೊಂಡಿದ್ದರು. ಸದರಿ ಜಮೀನುಗಳು ಮತ್ತು ಮನೆಗಳು ಮೂಲತಃ ಚೆನ್ನಬಸಪ್ಪ ಮತ್ತು ಆತನ ಪತ್ನಿ ಚಂದ್ರಮ್ಮನಿಗೆ ಸೇರಿದ್ದವು. ಈ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ಸದರಿ ಪಾಲು ವಿಭಾಗವನ್ನು ನಿಲವಂಜಿ ಗ್ರಾಮದಲ್ಲಿ ವೀರಭದ್ರಪ್ಪ, ಬೆಟ್ಟಪ್ಪ, ಹುಣಸಿಕಟ್ಟಿ ಬಸಪ್ಪ, ಈಶ್ವರಪ್ಪ ಮತ್ತು ಇತರರ ಸಮ್ಮುಖದಲ್ಲಿ ಮಾಡಿಕೊಂಡಿದ್ದಾರೆ. ಇವರ ಸಮ್ಮುಖದಲ್ಲಿ ಪಾಲು ವಿಭಾಗವಾಗಿದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.